**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**Spl.C.14/2023**

ದಿನಾಂಕ 13.03.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 13 ಪ್ರಾಸಾ - 8

| | | |
|---|---|---|
| ಹೆಸರು | ಃ | ಪ್ರಕಾಶ್ ಡಿ.ವಿ |
| ತಂದೆಯ ಹೆಸರು | ಃ | ವೀರೇಗೌಡ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಹೆಚ್‌ಸಿ-11, ರಾಮನಗರ ಪುರ ಪೊಲೀಸ್ ಠಾಣೆ |
| ವಾಸಸ್ಥಳ | ಃ | ರಾಮನಗರ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

2021 ರಿಂದ ನಾನು ರಾಮನಗರ ಪುರ ಠಾಣೆಯಲ್ಲಿ ಮುಖ್ಯ ಆರಕ್ಷಕ-234 ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 05.07.2022 ರಂದು ರಾತ್ರಿ 8.45 ಗಂಟೆ ಸಮಯದಲ್ಲಿ ಶ್ರೀಮತಿ ಶಿಲ್ಪಾ ಠಾಣೆಗೆ ಹಾಜರಾಗಿ ನೀಡಿದಂತಹ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಪ್ರಕರಣವನ್ನು ಗುನ್ನೆ ಸಂಖ್ಯೆ 75/2022 ರಲ್ಲಿ ದಾಖಲಿಸಿಕೊಂಡೆ. ದೂರನ್ನು ಸ್ವೀಕರಿಸಿದ ಸಲುವಾಗಿ ಸಹಿ ಮಾಡಿದ್ದು ಪಿರ್ಯಾದಿ ನಿ.ಪಿ.1 ಇದ್ದು, ಸಾಕ್ಷಿ ಗುರುತಿಸಿರುವ ತನ್ನ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಸದರಿ ದೂರಿಗೆ ಸಂಬಂಧಿಸಿದ ಪ್ರ.ವ.ಮಾ.ಯನ್ನು ದಾಖಲು ಮಾಡಿಕೊಂಡು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದಕ್ಕೆ ಸಂಬಂಧಿಸಿದ ಪ್ರ.ವ.ಮಾಹಿತಿಯನ್ನು ಈಗ ನೋಡುತ್ತಿದ್ದು ನಿ.ಪಿ.9 ಹಾಗೂ ಸಾಕ್ಷಿಯ ಸಹಿಯನ್ನು 9(ಎ) ಎಂದು ಗುರುತಿಸಲಾಯಿತು.

3. ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ.14 ರವರಿಗೆ ಒಪ್ಪಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ.ಎಸ್‌ಎಸ್‌ಎನ್ ವಕೀಲರಿಂದಃ**

4. ಕೃತ್ಯ ನಡೆದಿದೆ ಎಂದು ಹೇಳುವ ಸಮಯಕ್ಕೂ ದೂರು ಕೊಟ್ಟ ಸಮಯಕ್ಕೂ ಒಂದು ದಿನದ ವಿಳಂಬವಿದೆ ಎಂದರೆ ಸರಿ. ವಿಳಂಬದ ಕಾರಣವನ್ನು ದೂರಿನಲ್ಲಿ ತಿಳಿಸಿಲ್ಲ ಎಂದರೆ ಸರಿ. ಪ್ರಥಮ ವರ್ತಮಾನ ಮಾಹಿತಿಯಲ್ಲಿಯೂ ಸಹ ನಾನು ವಿಳಂಬದ ಕಾರಣವನ್ನು ಬರೆದಿಲ್ಲ ಎಂದರೆ ಸಾಕ್ಷಿ ದೂರಿನಲ್ಲಿ ಆ ಬಗ್ಗೆ ಹೇಳಿಕೊಳ್ಳದೇ ಇರುವ ಕಾರಣ ಅದನ್ನು ನಮೂದಿಸಿಲ್ಲ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ವಿಳಂಬದ ಕಾರಣವನ್ನು ವಿಚಾರಿಸಿ ನಮೂದು ಮಾಡಲು ನಿಮಗೇನು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಪಿರ್ಯಾದುದಾರಳು ಆ ಬಗ್ಗೆ ವಿವರಣೆ ಕೊಟ್ಟಿಲ್ಲ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಪಿರ್ಯಾದುದಾರಳು ವಿಳಂಬದ ಕಾರಣವನ್ನು ಹೇಳಿಕೊಂಡಿಲ್ಲ ಎಂದು ನಾನು ಪ್ರಥಮ ವರ್ತಮಾನದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ದೂರು ನೀಡಿದ ಸಮಯದಲ್ಲಿ ಅದು ಸುಳ್ಳು ದೂರು ಎಂದು ಕಂಡುಬಂದಿದ್ದರೂ ಸಹ ಪ್ರಥಮ ವರ್ತಮಾನ ಮಾಹಿತಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಥಮ ವರ್ತಮಾನದ ಅಧಾರದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**